# ಕನ್ನಡ ಸಾಹಿತ್ಯಕ್ಕೆ ವಚನಕಾರರ ಕೊಡುಗೆ

ರೇಖಾಮಣಿ. ಸಿ.ಎಂ.
ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮುಧೋಳ.

DOI: https://doi.org/10.5281/zenodo.17297620

## ABSTRACT:

ಕರ್ನಾಟಕದಲ್ಲಿ ಬಳಸಲಾಗುವ ಕನ್ನಡ ಭಾಷೆಯು ದೇಶದ ಪ್ರಮುಖ ಭಾಷೆಗಳಲ್ಲಿ ಒಂದಾಗಿದ್ದು ಭಾರತೀಯ ಮತ್ತು ಜಾಗತಿಕ ಸಂಸ್ಕೃತಿಗೆ ಸಾಹಿತ್ಯ, ಆಡಳಿತ, ವೈವಿಧ್ಯಮಯ ಅಭಿವ್ಯಕ್ತಿಯ ಮೂಲಕ ತನ್ನದೇ ಆದ ಕೊಡುಗೆ ನೀಡಿದೆ. ಸಾಹಿತ್ಯ, ಸಂಸ್ಕೃತಿ ಮತ್ತು ಕಲೆಯ ಮೂಲಕ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಆಡಳಿತ ಮತ್ತು ಸಾರ್ವಜನಿಕ ಜೀವನದಲ್ಲಿ ಕನ್ನಡವನ್ನು ಸಕ್ರಿಯವಾಗಿ ಬಳಸಲಾಗುತ್ತದೆ. ಈ ಮೂಲಕ ಕನ್ನಡ ಸಾಮಾಜಿಕ ಮತ್ತು ಆರ್ಥಿಕ ಪ್ರಶಂಸೆಗೆ ಪ್ರೋತ್ಸಾಹ ನೀಡಿದೆ. ದೇಶದ ಒಟ್ಟಾರೆ ಬೆಳವಣಿಗೆಯಲ್ಲಿ ಸಹಕರಿಸಿದೆ. ರಾಷ್ಟ್ರ ನಿರ್ಮಾಣದಲ್ಲಿ ಕನ್ನಡ ಭಾಷೆಯು ಅಖಂಡತೆ, ಸಾಂಸ್ಕೃತಿಕ ಸಂರಕ್ಷಣೆ, ಶಿಕ್ಷಣ ಮತ್ತು ಆರ್ಥಿಕ ಅಭಿವೃದ್ಧಿ ಹಾಗೂ ಪ್ರಾದೇಶಿಕ ಸೌಹಾರ್ದತೆಯನ್ನು ಉತ್ತೇಜಿಸುವಲ್ಲಿ ಪ್ರಮುಖವಾಗಿದೆ. ಪ್ರಾಚೀನ ದ್ರಾವಿಡ ಭಾಷೆಗಳಲ್ಲಿ ಒಂದಾದ ಕನ್ನಡವು ಸುಮಾರು ೨೫೦೦ ವರ್ಷಗಳಷ್ಟು ಹಳೆಯದು. ಭಾರತದ ಸಂವಿಧಾನದ ಅಡಿಯಲ್ಲಿ ನಿಗದಿತ ಭಾಷೆಯಾಗಿದೆ, ಕನ್ನಡ ಸಾಹಿತ್ಯವು ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದೆ. ಇಂತಹ ಕನ್ನಡ ಭಾಷೆಯಲ್ಲಿ ರಚನೆಗೊಂಡಿರುವ ಸಾಹಿತ್ಯ ರೂಪಗಳು ಹಲವಾರು ಇದ್ದು, ಅದರಲ್ಲಿ ವಚನಕಾರರ ಕೊಡುಗೆ ಅಪಾರ. ಎಲ್ಲರನ್ನೂ ಸಮಾನತೆಯಿಂದ ಕಾಣುವ ದೃಷ್ಟಿಕೋನವನ್ನು ಪ್ರಚಾರ ಮಾಡಿದ ಶರಣರು ರಚಿಸಿದ ವಚನಗಳು ಸರಳ ಭಾಷೆಯಲ್ಲಿ ಬದುಕಿನ ಅನುಭವಗಳನ್ನು, ತತ್ವಗಳನ್ನು ಸಾಮಾನ್ಯ ಜನರಿಗೆ ತಿಳಿಯುವಂತೆ ಮಾಡಿದರು.

## KEYWORDS:

ಸ್ತ್ರೀ, ಅರ್ಚನೆ, ಪೂಜೆ, ನೇಮವಲ್ಲ, ಮಂತ್ರ-ತಂತ್ರ.

**ಪೀಠಿಕೆ:**

ವಚನಕಾರರ ವಚನ ಸಾಹಿತ್ಯ ಕೇವಲ ಕನ್ನಡ ಸಾಹಿತ್ಯಕ್ಕೆ ಮಾತ್ರವಲ್ಲದೆ, ಭಾರತೀಯ ಹಾಗೂ ವಿಶ್ವ ಸಾಹಿತ್ಯಕ್ಕೂ ಅಮೂಲ್ಯವಾದ ಕೊಡುಗೆಯಾಗಿದೆ. ಇದು ವಿಶ್ವ ಸಾಹಿತ್ಯದಲ್ಲಿ ಕನ್ನಡದ ಗೌರವವನ್ನು ಹೆಚ್ಚಿಸಿದೆ. ಅತ್ಯಂತ ಸರಳವಾದ ಭಾಷೆಯಲ್ಲಿ ತಮ್ಮ ಆಲೋಚನೆಗಳನ್ನು ಮತ್ತು ಆವೇಶಗಳನ್ನು ನೇರವಾಗಿ ವ್ಯಕ್ತಪಡಿಸಿ ಜನಸಾಮಾನ್ಯರಿಗೆ ಸುಲಭವಾಗಿ ಅರ್ಥವಾಗುವಂತೆ ಮಾಡಿದರು. ಮೇಲು-ಕೀಳು ಎಂಬ ಭಾವನೆಗಳನ್ನು ತೊಲಗಿಸಿ ಪ್ರತಿಯೊಬ್ಬರೂ ತಮ್ಮ ವ್ಯಾಪ್ತಿಯಲ್ಲಿ ನಿಷ್ಠೆ, ಪ್ರಾಮಾಣಿಕತೆ, ಗೌರವದಿಂದ ಬದುಕಬೇಕೆಂಬುದನ್ನ ತಿಳಿಸಿದವರು ವಚನಕಾರರು. ಕಾಯಕವೇ ಕೈಲಾಸ, ದಾಸೋಹವೇ ದೈವ, ಎಂಬ ತತ್ವಗಳನ್ನು ಸಾರುವ ಮೂಲಕ ವಚನಕಾರರು ಕಠಿಣ ದುಡಿಮೆಗೆ ಮತ್ತು ಸಮಾನತೆಗೆ ಮಾನವೀಯ ಮೌಲ್ಯಗಳಿಗೆ ಒತ್ತು ನೀಡಿದವರು. ಯಾವುದೇ ಜಾತಿ, ಪಂಥಗಳ ಭೇದವಿಲ್ಲದೆ ಎಲ್ಲರೂ ಆಧ್ಯಾತ್ಮಿಕ ಹಾಗೂ ಸಾಮಾಜಿಕವಾಗಿ ಸಮಾನರು ಎಂದು ಸಾರಿದರು. ಇವರು ತಮ್ಮ ವಿಚಾರಗಳ ಮೂಲಕ ರಾಷ್ಟ್ರ ನಿರ್ಮಾಣಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಅಂತಹ ಅವರ ಪ್ರಮುಖ ವಿಚಾರಗಳೆಂದರೆ ಸ್ತ್ರೀ ಸಮಾನತೆ, ಜಾತಿಭೇದ ನಿರಾಕರಣೆ, ವೃತ್ತಿ

ಗೌರವ, ದಯೆಯೇ ಧರ್ಮದ ಮೂಲ ಹೀಗೆ ಹಲವಾರು ಮಾನವೀಯ ಮೌಲ್ಯಗಳನ್ನು ಒತ್ತಿ ಹೇಳುವುದರ ಮೂಲಕ ಸಮಾನತೆ, ಶಾಂತಿ, ಸಹಬಾಳ್ವೆಯನ್ನು ಹೇಳಿದರು.

ಸ್ತ್ರೀ–ಪುರುಷರ ನಡುವೆ ಇದ್ದ ಭೇದ ಕುರಿತು ತಮ್ಮದೇ ರೀತಿಯಲ್ಲಿ ಪ್ರತಿಭಟಿಸಿದ ವಚನಕಾರರು ತಮ್ಮ ಕಾಲದಲ್ಲಿ ಹೆಣ್ಣು–ಗಂಡು ಎಂದು ಯಾವುದೇ ವ್ಯತ್ಯಾಸ ಮಾಡದೆ ಎಲ್ಲರೂ ಒಂದೇ ಎಂಬ ಭಾವನೆಯನ್ನು ವ್ಯಕ್ತಪಡಿಸಿದರು. ಹೆಣ್ಣಿನ ಬಗ್ಗೆ ಇದ್ದ ತಾತ್ಸಾರ ಭಾವನೆ, ಜಾತಿ ಪದ್ಧತಿ, ಶರಣ ಚಳುವಳಿಯಲ್ಲಿ ಸ್ವಲ್ಪ ಮಟ್ಟಿಗಾದರೂ ಕೊನೆಗೊಂಡಿತು ಎಂಬುದನ್ನ ವಚನಗಳಲ್ಲಿ ನೋಡಬಹುದು.

**ಮೊಲೆ ಮೂಡಿ ಬಂದರೆ ಹೆಣ್ಣೆಂಬರು**
**ಮೀಸೆ ಕಾಸೆ ಬಂದರೆ ಗಂಡೆಂಬರು**
**ನಡುವೆ ಸುಳಿವ ಆತ್ಮನೂ ಗಂಡು ಅಲ್ಲ**
**ಹೆಣ್ಣು ಅಲ್ಲ ಕಾಣಾ ರಾಮನಾಥ**

ಜೇಡರ ದಾಸಿಮಯ್ಯ ಈ ವಚನದಲ್ಲಿ ಗಂಡು ಮತ್ತು ಹೆಣ್ಣು ಅಂದರೆ ಕೇವಲ ದೈಹಿಕವಾದ ವ್ಯತ್ಯಾಸ ಅಲ್ಲ. ಅಂತರಂಗದಲ್ಲಿ ಒಂದು ಆತ್ಮ ಎಂಬುದು ಇದೆ, ಅದು ಹೆಣ್ಣು ಅಲ್ಲ, ಗಂಡು ಅಲ್ಲ. ಇದರಿಂದ ವ್ಯಕ್ತಿಯನ್ನು ಅಳೆದರೆ ಯಾವುದೇ ವ್ಯತ್ಯಾಸ ಇರುವುದಿಲ್ಲ ಎಂದು ಹೇಳುವುದರ ಮೂಲಕ ಹೆಣ್ಣು ಮತ್ತು ಗಂಡು ಎಂಬ ಭೇದವನ್ನು ಕೊನೆಗಾಣಿಸಲು ಪ್ರಯತ್ನಪಟ್ಟಿದ್ದಾನೆ. ಗಡ್ಡ–ಮೀಸೆಗಳಲ್ಲಿರುವ ಭೇದ ಕೇವಲ ದೇಹಕ್ಕೆ. ಅದು ದೈಹಿಕವಾದದ್ದು. ಮನಸ್ಸು, ಆತ್ಮ, ಜೀವಗಳಿಗೆ ಹೆಣ್ಣು–ಗಂಡೆಂಬ ಭೇದವಿಲ್ಲ. ದೇಹಕ್ಕಿಂತ ಜೀವ ದೊಡ್ಡದು. ಜೀವ ಇಲ್ಲದ ದೇಹಕ್ಕೆ ಯಾವ ಬೆಲೆಯೂ ಇರುವುದಿಲ್ಲ. ಹೀಗಾಗಿ ಆತ್ಮದಲ್ಲಿ ಭೇದವಿಲ್ಲದಿದ್ದಾಗ ಗಂಡು–ಹೆಣ್ಣು ಹೇಗೆ ಬೇರೆ ಬೇರೆ ಆಗುತ್ತದೆ, ಎಂಬ ಸತ್ಯವನ್ನ ವಚನಕಾರರು ಅರ್ಥಪೂರ್ಣವಾಗಿ ವಿಶ್ಲೇಷಣೆ ಮಾಡಿದ್ದಾರೆ.

**ಹೊನ್ನು ಮಾಯೆಯೆಂಬರು, ಹೊನ್ನು ಮಾಯೆಯಲ್ಲ**
**ಹೆಣ್ಣು ಮಾಯೆಯೆಂಬರು, ಹೆಣ್ಣು ಮಾಯೆಯಲ್ಲ**
**ಮಣ್ಣು ಮಾಯೆಯೆಂಬರು, ಮಣ್ಣು ಮಾಯೆಯಲ್ಲ**
**ಮನದ ಮುಂದಣ ಆಸೆಯೇ ಮಾಯೆ ಕಾಣಾ ಗುಹೇಶ್ವರ**

ಪ್ರಾಚೀನ ಕಾಲದಿಂದಲೂ ಹೆಣ್ಣು–ಹೊನ್ನುಗಳನ್ನು ಮಾಯೆ ಎಂದು ಜನ ನಂಬಿದರು. ಆದರೆ ಅಲ್ಲಮ ಈ ವಚನವನ್ನು ತಾತ್ವಿಕವಾಗಿ ಸಮರ್ಥಿಸಿದ್ದಾನೆ. ಮಾಯೆ ಎಂಬುದು ನೋಡುವ ಕಣ್ಣಿಗೆ ಹೊರತು ಕಾಣುವ ವಸ್ತುವಿಗಲ್ಲ. ಮನದ ಮುಂದಣ ಆಸೆಯೇ ಮಾಯೆ. ಆಸೆಯಿಂದಲೇ ಮೋಹ ಹುಟ್ಟುತ್ತದೆ, ಅದೇ ಮೋಹ ಮಾಯೆಯಾಗಿ ಕಾಣುತ್ತದೆ. ತನ್ನೊಳಗಿನ ಆಸೆಯನ್ನು ಮಿತಿಗೊಳಿಸಬೇಕು. ನಮ್ಮ ಮನದೊಳಗಿನ ಆಸೆಗೆ ಕಡಿವಾಣ ಹಾಕಿ ಮನಸ್ಸು ಶುದ್ಧ ಮಾಡಿಕೊಳ್ಳಿ, ನಂತರ ಕಾಣುವುದೆಲ್ಲದರಲ್ಲಿ ಒಳಿತನ್ನೇ ಕಾಣುತ್ತೇವೆ. ವಚನಕಾರರು ಸ್ತ್ರೀಗೆ ಸಮಾನ ಸ್ಥಾನಮಾನ ನೀಡಿ ಗೌರವದಿಂದ ಕಂಡರು ಎನ್ನುವುದಕ್ಕೆ ಇನ್ನೂ ಅನೇಕ ವಚನಗಳನ್ನು ಉಲ್ಲೇಖಿಸಬಹುದು. ದಾಂಪತ್ಯ ಜೀವನದಲ್ಲಿ ಸತಿ–ಪತಿಗಳು ಒಂದಾಗಿರಬೇಕೆಂಬುದೇ ಅವರ ನಿಲುವಾಗಿದೆ. "ಸತಿ ಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ" ಎಂದು ಹೇಳಿರುವುದು ಇದಕ್ಕೆ ಉತ್ತಮ ಉದಾಹರಣೆ ಎಂಬುದನ್ನ ನೋಡಬಹುದು.

**ನೆಲ ಒಂದೇ ಹೊಲಗೇರಿ ಶಿವಾಲಯಕ್ಕೆ**
**ಜಲ ಒಂದೇ ಶೌಚ–ಆಚಮನಕ್ಕೆ**
**ಕುಲ ಒಂದೇ ತನ್ನ ತಾನರಿದವರಿಗೆ**
**ಫಲ ಒಂದೇ ಷಡುದರುಶನ ಮುಕ್ತಿಗೆ**

**ನಿಲವು ಒಂದೇ ಕೂಡಲಸಂಗಮದೇವ ನಿಮ್ಮನರಿದವಂಗೆ.**

ಬಸವಣ್ಣನವರ ಈ ವಚನದಲ್ಲಿ ಜಾತ್ಯಾತೀತ ನಿಲುವು ಎದ್ದು ಕಾಣುತ್ತದೆ. ನೆಲ-ಜಲಗಳ ಮೂಲಕ ಕುಲ ಭೇದವನ್ನು ಇಲ್ಲಿ ಅಳಿಸಿ ಹಾಕಿದ್ದಾರೆ. ಹೊಲಗೇರಿ ಮತ್ತು ಶಿವಾಲಯವಿರುವ ಜಾಗ ಎರಡೂ ಒಂದೇ ಆಗಿದೆ. ಹೀಗೆ ಎರಡು ಒಂದೇ ಆಗಿರುವಾಗ ಶಿವಾಲಯ ಮತ್ತು ಹೊಲಗೇರಿ ಹೇಗೆ ಶ್ರೇಷ್ಠ ಮತ್ತು ಕನಿಷ್ಠ? ಹಾಗೆಯೇ ಸ್ನಾನ ಮಾಡುವುದಕ್ಕೆ ಮತ್ತು ತೀರ್ಥ ಹಂಚುವುದಕ್ಕೂ ಒಂದೇ ಜಲವನ್ನು ಉಪಯೋಗಿಸಲಾಗುತ್ತದೆ. ಜಲ ಒಂದೇ ಆಗಿರುವಾಗ ಭೇದವೇಕೆ? ತನ್ನನ್ನು ತಾನು ಅರಿದವಂಗೆ ಒಂದೇ ಕುಲ ಎಂದು ಹೇಳಿರುವುದು ಅರ್ಥಪೂರ್ಣವಾಗಿದೆ. ಭೂಮಿ ಒಂದೇ ಆದರೂ ನಮ್ಮ ಜನರ ಮನಸ್ಸು ಜಾತಿ-ಮತಗಳ ಸಂಕೋಲೆಯಲ್ಲಿ ಸಂಪೂರ್ಣವಾಗಿ ಮುಳುಗಿದೆ. ಅಜ್ಞಾನಿಗಳು, ಆಷಾಡಭೂತಿಗಳು, ದುರಾಚಾರಿಗಳು, ದುಷ್ಟರು, ನಿಕೃಷ್ಟರು ವಾಸಮಾಡುವ ಜನರಿರುವ ಸ್ಥಳವೇ ಹೊಲಗೇರಿ. ಕೆರೆ, ಬಾವಿ, ತೊರೆಯ ನೀರನ್ನು ದೇವರ ವಿಗ್ರಹದ ಮೇಲೆ ಸುರಿದು ಅಭಿಷೇಕ ಮಾಡಿದರೆ ಅದು ತೀರ್ಥ. ಅದೇ ಕೆರೆ, ಬಾವಿ, ತೊರೆಯ ನೀರನ್ನು ಶೌಚಕ್ಕೆ ಬಳಸಿದರೆ ಕೊಳಕಾಗಿ ಬಿಡುತ್ತದೆ. ಜ್ಞಾನದಿಂದ ಉತ್ತಮ-ಅಧಮ ಎಂಬ ಪರಿಕಲ್ಪನೆ ಮುಖ್ಯವಾಗುತ್ತದೆಯೇ ಹೊರತು ಜಾತಿ-ಕುಲದ ಮೂಲಕ ಶ್ರೇಷ್ಠ-ನೀಚ ಎಂಬುದನ್ನು ಒಪ್ಪಲು ಸಾಧ್ಯವಿಲ್ಲ ಎಂಬ ತತ್ವವನ್ನು ಈ ವಚನ ಸಾರುತ್ತದೆ.

**ದಯವಿಲ್ಲದ ಧರ್ಮವದೇವುದಯ್ಯ?**
**ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ**
**ದಯವೇ ಧರ್ಮದ ಮೂಲವಯ್ಯ**
**ಕೂಡಲಸಂಗಯ್ಯನಂತಲ್ಲದೊಲ್ಲನಯ್ಯ.**

ಭೂಮಿಯ ಮೇಲೆ ವಾಸಿಸುವ ಮಾನವ ಸಮಾಜಜೀವಿ. ಯಾವುದೇ ಧರ್ಮ, ಜಾತಿಗಳಿರಲಿ, ಎಲ್ಲಾ ಧರ್ಮಗಳು ಪ್ರತಿಪಾದಿಸುವುದು ದಯೆ. ದಯವೇ ಧರ್ಮದ ಮೂಲಾಂಶ. ಸಮಷ್ಟಿ ಹಿತವನ್ನು ಪಾಲಿಸಬೇಕಾದರೆ ದಯೆ ಇರಬೇಕು ಸಕಲ ಪ್ರಾಣಿಗಳಲ್ಲಿ. ಎಲ್ಲಿ ದಯೆ ಇರುವುದಿಲ್ಲವೊ ಅಲ್ಲಿ ದ್ವೇಷ-ಅಸೂಯೆಗಳು ತುಂಬಿರುತ್ತವೆ. ಇದು ವಿನಾಶಕ್ಕೆ ಕಾರಣವಾಗುತ್ತದೆ. ಹಾಗಾಗಿ ಧರ್ಮ ಯಾವುದೇ ಆಗಲಿ, ಪ್ರತಿಯೊಂದು ಧರ್ಮವು ದಯೆಯನ್ನು ಪ್ರತಿಪಾದಿಸಬೇಕು. ದಯೆಯೇ ಧರ್ಮದ ಮೂಲವಾಗಬೇಕು ಎಂಬ ನುಡಿ ಸಮಾಜದಲ್ಲಿ ಜನರು ಪರಸ್ಪರ ಶಾಂತಿಯಿಂದ ಸಹಬಾಳ್ವೆ ನಡೆಸಲು ಸಹಕಾರಿಯಾಗಿದೆ.

**ಕೊಲ್ಲುವವನೇ ಮಾದಿಗ**
**ಹೊಲಸು ತಿಂಬುವವನೇ ಹೊಲೆಯ**
**ಕುಲವೇನೋ ಆವಂದಿರ ಕುಲವೇನೋ**
**ಸಕಲ ಜೀವಾತ್ಮರಿಗೆ ಲೇಸನೆ ಬಯಸುವ**
**ನಮ್ಮ ಕೂಡಲಸಂಗನ ಶರಣರೇಕುಲಜರು.**

ಒಬ್ಬ ಮನುಷ್ಯ ತನ್ನ ನಡವಳಿಕೆಯಿಂದ ಕೀಳಾಗುತ್ತಾನೆಯೇ ಹೊರತು ಅವನ ಹುಟ್ಟಿನಿಂದಲ್ಲ. ಮಾದಿಗ, ಹೊಲೆಯ ಎಂದು ಊರ ಹೊರಗಿರುವವರನ್ನು ಕರೆಯುವರು. ಯಜ್ಞ-ಯಾಗಾದಿಗಳಲ್ಲಿ ಪಶು-ಪ್ರಾಣಿಗಳನ್ನ ಬಲಿಕೊಟ್ಟು ಕೊಂದು ತಿನ್ನುವವರು ಹೊಲೆಯರು-ಮಾದಿಗರು. ಸಕಲ ಜೀವಾತ್ಮರಿಗೆ ಯಾರು ಒಳ್ಳೆಯದನ್ನ ಹಾರೈಸುತ್ತಾನೋ, ಒಳ್ಳೆಯದನ್ನು ಮಾಡುತ್ತಾನೋ, ಅವನೇ ಕುಲಜ ಎಂದು ಬಸವಣ್ಣ ಹೇಳುತ್ತಾನೆ.

**ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ**
**ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ,**
**ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ,**

**ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ,**
**ಇದೇ ನಮ್ಮ ಕೂಡಲಸಂಗಮದೇವನೊಲಿಸು ಪರಿ॥**

ಅಧಿಕಾರ, ಆಸ್ತಿಯ ವ್ಯಾಮೋಹದಿಂದ ಮನುಷ್ಯ ಇಂದು ಹುಸಿಯನ್ನಲ್ಲದೆ ಬೇರೆ ಏನನ್ನು ನುಡಿಯುತ್ತಿಲ್ಲ. ತನ್ನ ಸ್ವಾರ್ಥಕ್ಕಾಗಿ ಇನ್ನೊಬ್ಬರನ್ನು ಕೊಂದು ಬದುಕುವ ಯೋಚನೆ, ತನ್ನ ತಾನು ಶ್ರೇಷ್ಠನೆಂಬಂತೆ ಬಿಂಬಿಸಿಕೊಳ್ಳುತ್ತ, ಇತರರನ್ನು ದೂಷಿಸಿಕೊಂಡು ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿದ್ದಾನೆ. ಕಳ್ಳತನ, ಕೊಲೆ, ಹುಸಿ, ಕೋಪ, ಅನ್ಯರನ್ನು ಅಸಹ್ಯಪಡುವುದು, ತನ್ನನ್ನು ತಾನು ಹೊಗಳಿಕೊಳ್ಳುವುದು, ಇವುಗಳನ್ನು ನಾಶ ಮಾಡಿಕೊಂಡವನೆ ಅಂತರಂಗ–ಬಹಿರಂಗ ಶುದ್ಧಿ ಮಾಡಿಕೊಂಡವನು. ಇದು ಪ್ರಸ್ತುತ ಕಾಲದಲ್ಲಿ ಎಲ್ಲರೂ ಅನುಸರಿಸಲೇಬೇಕಾದ ಬಸವಣ್ಣನವರ ಮಹತ್ವದ ಸಂದೇಶ. ಸಾವಿರಾರು ವರ್ಷಗಳು ಕಳೆದರೂ ಸರ್ವಕಾಲಕ್ಕೂ ಸರ್ವಸಮ್ಮತವಾದ ಇಂತಹ ಸಂದೇಶಗಳಿಗೆ ಜಗತ್ತನ್ನ ಸರಿದಾರಿಯಲ್ಲಿ ಮುನ್ನಡೆಸುವ ಶಕ್ತಿ ಇರುವಂತದ್ದು. ಮಾನವ ಸುಳ್ಳು–ಮೋಸಗಳಿಂದ ದೂರವಿದ್ದು ಪ್ರಾಮಾಣಿಕ ಜೀವನ ನಡೆಸಿ ತನ್ನ ಬದುಕನ್ನ ಸಾರ್ಥಕಪಡಿಸಿಕೊಳ್ಳಬೇಕೆಂಬುದು ಬಸವಣ್ಣನವರ ಆಶಯ. ಬಸವಣ್ಣನ ಇಂತಹ ಸಂದೇಶಗಳು ಸಮಾಜದಲ್ಲಿ ಜನರು ಪರಸ್ಪರ ಮಾನವೀಯ ಮೌಲ್ಯಗಳನ್ನು ಕಂಡುಕೊಂಡು ಸಮಾಜದಲ್ಲಿ ಒಳ್ಳೆಯ ರೀತಿಯಲ್ಲಿ ಬದುಕಲು ಪ್ರೇರಣೆಯಾಗುತ್ತದೆ.

ಅದೇ ರೀತಿ ಮನುಷ್ಯನಿಗೆ ಆಸೆ ಎಂಬುದು ಅಂತರಂಗದಲ್ಲಿ ಸಹಜ ಸ್ವಭಾವದಂತೆ ಆವರಿಸಿಕೊಂಡಿದೆ. ಅಂತರಂಗಕ್ಕೂ ಬಹಿರಂಗಕ್ಕೂ ಮಿತಿ ಹಾಕಿಕೊಳ್ಳಬೇಕು. ಹಣ, ಒಡವೆ, ಭೂಮಿ ಮೊದಲಾಗಿ ಪರ ವಸ್ತುಗಳನ್ನು ಅನ್ಯಾಯದಿಂದ ಪಡೆಯುವುದಿಲ್ಲ. ಬದಲಾಗಿ ಮತ್ತೊಬ್ಬರ ಸಂಪತ್ತು ನನ್ನದಲ್ಲ ಎಂಬುದು ನಿಯಮ ಎಂಬುದನ್ನ ಸತ್ಯಕ್ಕ ತನ್ನ ವಚನಗಳಲ್ಲಿ ಅರ್ಥಪೂರ್ಣವಾಗಿ ಹೇಳಿದ್ದಾಳೆ.

**ಅರ್ಚನೆ ಪೂಜೆ ನೇಮವಲ್ಲ;**
**ಮಂತ್ರ–ತಂತ್ರ ನೇಮವಲ್ಲ;**
**ಧೂಪ–ದೀಪದಾರತಿ ನೇಮವಲ್ಲ;**
**ಪರಧನ ಪರಸ್ತ್ರೀ ಪರ ದೈವಂಗಳಿಗೆರಗದಿಪ್ಪುದೆ ನೇಮ**
**ಶಂಬುಜಕೇಶ್ವರನಲ್ಲಿ ಇವು ಕಾಣಿರಣ್ಣಾ ನಿತ್ಯ ನೇಮ.**

ಪೂಜೆ, ವ್ರತಾಚರಣೆ ಮೊದಲಾದ ನೇಮಗಳು ನೇಮವಲ್ಲ. ಮಂತ್ರ, ತಂತ್ರ, ಧೂಪ ಮೊದಲಾದವುಗಳು ಅವರವರ ಅಭಿರುಚಿ, ನಂಬಿಕೆಗಳು, ಅನ್ಯರನ್ನು ಮೆಚ್ಚಿಸುವುದಕ್ಕೆ ಇರುವ ವಿಧಾನಗಳು ಹೊರತು, ಪರಸ್ತ್ರೀ, ಮತ್ತೊಬ್ಬರ ಸಂಪತ್ತು ನನ್ನದಲ್ಲ ಎಂಬುದೇ ನೇಮ ಆಚರಣೆ. ಮಂತ್ರ, ತಂತ್ರ, ಧೂಪಾದಾರತಿ ಇವೆಲ್ಲವೂ ಭಗವದ್ಭಕ್ತಿಯ ಆಚರಣೆಗಳಾದರೂ ಅವುಗಳ ಹಿಂದೆ ನಿಷ್ಕಲ್ಮಶವಾದ ಲೋಕಸುಖವನ್ನು ಬಯಸುವ ಮನೋಭಾವ ಇರುವುದಿಲ್ಲ. ಇಂತಹ ಮಂತ್ರ, ತಂತ್ರ, ಧೂಪಗಳಿಂದ ಯಾವುದೇ ಪ್ರತಿಫಲ ದೊರೆಯುವುದಿಲ್ಲ ಎಂಬುದು ಸತ್ಯಕ್ಕನ ನಿಲುವು.

ಹಾಗೆಯೇ ಶ್ರೀಮಂತರು ಭೌತಿಕವಾಗಿ ದೇವಾಲಯಗಳನ್ನು ಕಟ್ಟುತ್ತಾರೆ. ಆಡಂಬರದ ಭಕ್ತಿ ಮಾಡುತ್ತಾರೆ. ಆದರೆ ಬಸವಣ್ಣನವರು ದೇವಾಲಯವನ್ನು ಮಾನವ ಶರೀರದ ಪ್ರತೀಕವಾಗಿ ಬಳಸುವ ವಚನ ಹೆಚ್ಚು ಅರ್ಥಪೂರ್ಣವಾಗಿದೆ. ದೇವರನ್ನು ಹುಡುಕಿಕೊಂಡು ಎಲ್ಲೋ ದೇವಾಲಯಗಳಿಗೆ ಹೋಗುವ ಅವಶ್ಯಕತೆ ಇರುವುದಿಲ್ಲ. ಇರುವಲ್ಲಿಯೇ ಶಿವನನ್ನು ಕಾಣಬೇಕು. ಶ್ರೇಷ್ಠವಾದ ಈ ದೇಹವೇ ದೇವರ ಗುಡಿ, ಶಿರವೇ ಹೊನ್ನ ಕಳಶ. ಆ ಶರೀರದಲ್ಲಿ ಶಿವ ನೆಲೆಸಿರುತ್ತಾನೆ. ದೇವಾಲಯ ನಾಶವಾಗಬಹುದು, ನಿಜವಾದ ಭಕ್ತಿ, ಅರಿವು ಎಂದೂ

ನಾಶವಾಗುವುದಿಲ್ಲ ಎಂಬುದನ್ನ ಈ ಕೆಳಗಿನ ವಚನ ಹೇಳುತ್ತದೆ.

**ಉಳ್ಳವರು ಶಿವಾಲಯವ ಮಾಡುವರು;**
**ನಾನೇನು ಮಾಡಲಿ ಬಡವನಯ್ಯ?**
**ಎನ್ನ ಕಾಲೇ ಕಂಬ ದೇಹವೇ ದೇಗುಲ**
**ಶಿರವೇ ಹೊನ್ನ ಕಳಶವಯ್ಯ**
**ಕೂಡಲಸಂಗಮದೇವ ಕೇಳಯ್ಯ**
**ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ.**

## ಉಪಸಂಹಾರ

೧೨ನೇ ಶತಮಾನದಲ್ಲಿ ರಚನೆಯಾದ ಇಂತಹ ವಚನಗಳು ಸ್ವಂತಿಕೆಯಿಂದ ಮೆರೆವ ವಚನಗಳಾಗಿದ್ದು, ಕನ್ನಡ ಸಾಹಿತ್ಯದಲ್ಲಿ ಪ್ರಭಾವಶಾಲಿ ಆತ್ಮ ವಿಮರ್ಶೆಯ ಮಾಧ್ಯಮವಾಗಿ ಸ್ವತಂತ್ರವಾಗಿ ಬೆಳೆದು ವಿಜೃಂಭಿಸಿ ಮುಂದಿನ ಸಾಹಿತ್ಯ ಪರಂಪರೆಗಳ ಮೇಲೆ ಪ್ರಭಾವ ಬೀರಿ ವಿಶ್ವ ಸಾಹಿತ್ಯದಲ್ಲೂ ಒಂದು ಅವಿಭಾಜ್ಯ ಅಂಗವಾಗಿ ಉಳಿದಿದೆ.

## ಪರಾಮರ್ಶನ ಗ್ರಂಥಗಳು:

1. ವಚನ ಸಂಚಯ, ಬುಕ್ ಬ್ರಹ್ಮ. ಅಂತರ್ಜಾಲ
2. ಮರುಳಸಿದ್ದಪ್ಪ ಕೆ, ನಾಗರಾಜು ಕಿ.ರಂ (೨೦೧೨), ವಚನ ಕಮ್ಮಟ. ಸ್ವಪ್ನಾ ಬುಕ್ ಹೌಸ್. ಬೆಂಗಳೂರು.

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4.0 International License.